ಇಂದು ದಿನಾಂಕಃ 11.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಜಿ.ಎಸ್.ಎಮ್. ವಕೀಲರಿಂದಃ

1. ನನ್ನ ಗ್ರಾಮದಲ್ಲಿ ರಂಗನಾಥ ದೇವಸ್ಥಾನ ಎಂಬ ಪ್ರಸಿದ್ಧ ದೇವಸ್ಥಾನ ಇದೆ ಎಂದರೆ ಸರಿ. ನನ್ನ ಗ್ರಾಮದಲ್ಲಿ ರಂಗನಾಥ, ರಂಗನಗೌಡ ಹಾಗೂ ರಂಗಪ್ಪ ಎಂಬುವ ಹಲವಾರು ವ್ಯಕ್ತಿಗಳು ಇದ್ದಾರೆ ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿಗಳು ಕುಟುಂಬದ ಬಗ್ಗೆ ನನಗೆ ಸ್ವಲ್ಪ ಮಾಹಿತಿ ಇದೆ. ಸದರಿಯವರ ಕುಟುಂಬದ ಬಗ್ಗೆ 35-40 ವರ್ಷಗಳಿಂದ ಮಾಹಿತಿ ಇದೆ. ನನ್ನ ಪ್ರಮಾಣ ಪತ್ರದಲ್ಲಿ ಸದರಿ ವಿಷಯವನ್ನು ಬರೆಸಿರುತ್ತೇನೆ ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ವಂಶಾವಳಿಗಳ ಬಗ್ಗೆ ಮಾಹಿತಿ ಇದೆ. ಮೂಲ ಪುರುಷ ರಂಗಪ್ಪ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿಯವರು ವಾದಿಗಳ ಮೂಲ ಪುರುಷ ಎಂದು ನನ್ನ ತಂದೆಯವರು ಹಾಗೂ ಇತರರು ಹೇಳಿದ ಮೇರೆಗೆ ಹೇಳುತ್ತಿದ್ದೇನೆ.

2. ನನ್ನ ತಂದೆ 1983 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿದಾಗ ನನಗೆ 18 ವರ್ಷ. ಮೂಲ ಪುರುಷ ಭರಮಪ್ಪ ಅವರು ಪ್ರತಿವಾದಿಗಳ ಮೂಲಪುರುಷ ಎಂದು ನನ್ನ ತಂದೆ ಆಗಾಗ್ಗೆ ಹೇಳುತ್ತಿದ್ದ ಮಾಹಿತಿಯ ಮೇರೆಗೆ ಬರೆಸಿರುತ್ತೇನೆ. ನಮ್ಮ ಮತ್ತು ವಾದಿ ಹಾಗೂ ಪ್ರತಿವಾದಿಗಳ ಕುಟುಂಬದವರು ತಮ್ಮ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದರಿಂದ ನಾನು ಸದರಿ ವಿಷಯಗಳನ್ನು ತಿಳಿದುಕೊಳ್ಳಲು ಸಂದರ್ಭದಲ್ಲಿ ಬಂದಿರುತ್ತದೆ. ರಂಗಪ್ಪನ ತಂದೆಯ ಹೆಸರು ತಿಮ್ಮಪ್ಪ ಎಂದರೆ ಸರಿಯಲ್ಲ. ರಂಗಪ್ಪನ ತಂದೆಯ ಹೆಸರು ಗಿರಿಯಪ್ಪ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ರಂಗಪ್ಪನ ತಂದೆಯ ಹೆಸರು ಗಿರಿಯಪ್ಪ ಎಂದು ಬರೆಸಲು ತೊಂದರೆ ಇತ್ತು ಎಂದರೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ ಆ ರೀತಿ ಬರೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಕಳಗೊಂಡ ಗ್ರಾಮದಲ್ಲಿರುವ ದೊಡ್ಡಮನಿ ಎಂಬ ಮನೆತನದ ಮೂಲಪುರುಷನ ಹೆಸರು ಗೋವಿಂದಪ್ಪ ಎಂದರೆ ಸರಿಯಲ್ಲ. ದೊಡ್ಡಮನಿ ಮನೆತನದ ಮೂಲಪುರುಷನ ಹೆಸರು ರಂಗಪ್ಪ. ಮೂಲಪುರುಷ ಗೋವಿಂದಪ್ಪನಿಗೆ ದೊಡ್ಡರಂಗಪ್ಪ ಮತ್ತು ಸಣ್ಣರಂಗಪ್ಪ ಎಂಬ ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಸದರಿಯವರ ಪೈಕಿ ಸಣ್ಣರಂಗಪ್ಪ ಅವರಿಗೆ ತಿಮ್ಮಪ್ಪ, ಗೋವಿಂದಪ್ಪ ಮತ್ತು ಗಿರಿಯಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ. ಸದರಿ ಹೆಸರಿನ ವ್ಯಕ್ತಿಗಳು ಇಲ್ಲ ಎಂದು ನುಡಿಯುತ್ತಾರೆ. ಸಣ್ಣರಂಗಪ್ಪ ಅವರ ಮಗ ತಿಮ್ಮಪ್ಪ ಅವರಿಗೆ ರಂಗಪ್ಪ ಮತ್ತು ಹನುಮಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ. ತಿಮ್ಮಪ್ಪನ ಮಗ ರಂಗಪ್ಪ ಅವರಿಗೆ ನಿಂಗಪ್ಪ,

ಕೆಂಚಪ್ಪ ಮತ್ತು ಗಿರಿಯಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ. ತಿಮ್ಮಪ್ಪನ ಮಗ ರಂಗಪ್ಪನ ಮಕ್ಕಳ ಪೈಕಿ ಕೆಂಚಪ್ಪನಿಗೆ ಭರಮಪ್ಪ ಎಂಬ ಒಬ್ಬನೇ ಮಗ ಎಂದರೆ ಸರಿಯಲ್ಲ. ಸದರಿ ಕೆಂಚಪ್ಪನ ಹೆಂಡತಿಯ ಹೆಸರು ನಿಂಗವ್ವ ಎಂದರೆ ಸರಿಯಲ್ಲ. ಸದರಿ ನಿಂಗವ್ವ ಭರಮಪ್ಪನ ತಾಯಿ ಎಂದರೆ ಸರಿಯಲ್ಲ. ಭರಮಪ್ಪನಿಗೆ ನಿಂಗಪ್ಪ, ಚೌಡಪ್ಪ ಮತ್ತು ಭರಮಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ.

4. ಭರಮಪ್ಪನ 3 ಜನ ಮಕ್ಕಳ ಪೈಕಿ ನಿಂಗಪ್ಪನಿಗೆ ಭರಮಪ್ಪ, ರಾಮಪ್ಪ, ಲಕ್ಷ್ಮಪ್ಪ ಮತ್ತು ಪರಮೇಶಪ್ಪ ಎಂಬ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಭರಮಪ್ಪ, ರಾಮಪ್ಪ, ಲಕ್ಷ್ಮಪ್ಪ ಮತ್ತು ಪರಮೇಶಪ್ಪ ಅವರುಗಳೆ ಈ ದಾವೆಯ ಪ್ರತಿವಾದಿಗಳು ಎಂದರೆ ಸರಿಯಲ್ಲ. ಭರಮಪ್ಪನ 3 ನೇ ಮಗ ಭರಮಪ್ಪ ಅವನಿಗೆ ಹುಚ್ಚಪ್ಪ ಮತ್ತು ಭೀರಪ್ಪ ಎಂಬ ಇಬ್ಬರು ಮಕ್ಕಳು ಇದ್ದು, 2 ನೇ ಭೀರಪ್ಪನೇ ಈ ದಾವೆಯ 5 ನೇ ಪ್ರತಿವಾದಿ ಎಂದರೆ ಸರಿ.

ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.